ಸೊಬಗಿನ ಜೊತೆ ಮೈಸೂರು ನಗರಿಯ ವೈಶಿಷ್ಟ್ಯವನ್ನು ಕಟ್ಟಿಕೊಡುತ್ತದೆ.

### ಫೇಕುಗಳ ನಡುವೆ!

ಬೆಂಗಳೂರಿನಲ್ಲಿರುವ ವಿದ್ಯಾರ್ಥಿ ಭವನವಿದ್ದಂತೆ ಮೈಸೂರಿನಲ್ಲಿ ಮೈಲಾರಿ ಹೋಟೆಲ್ ಭಾರಿ ಪ್ರಸಿದ್ಧಿ. ಅರಮನೆ ನಗರಿಯೊಂದಿಗೆ ತಳುಕು ಹಾಕಿಕೊಂಡಿರುವ ಹೆಸರು ಮಸಾಲೆ ದೋಸೆ. ಅದರಲ್ಲೂ ಗರಿಗರಿಯಾದ ಈ ದೋಸೆಯನ್ನು ಮೈಲಾರಿ ಹೋಟೆಲ್‌ನಲ್ಲಿ ತಿಂದರೆ ಮತ್ತಷ್ಟು ರುಚಿ. ಅದೇ ಯಶಸ್ಸಿನ ಹಾದಿ ಹಿಡಿಯಲು ಪ್ರಯತ್ನಿಸಿ ಗಲ್ಲಿಗೊಂದರಂತೆ ಮೈಲಾರಿ ಹೋಟೆಲ್‌ಗಳು ತಲೆ ಎತ್ತಿವೆ. ಹಿಂದೆ ಮುಂದೆ ಬೇರೆ ಹೆಸರು ಇಟ್ಟುಕೊಂಡು ಮಧ್ಯದಲ್ಲಿ ಮಾತ್ರ ಮೈಲಾರಿ ಎಂಬ ಹೆಸರು ಸೇರಿಸಿಬಿಡುತ್ತಾರೆ. ಮೈಸೂರು ನೋಡಲು ಬಂದವರಿಗೆ ಇಂಥ ಹೋಟೆಲ್ ಒಳಹೊಕ್ಕಿ ತಿಂದ ಮೇಲಷ್ಟೇ ನಿಜವಾದ ಬಂಡವಾಳ ಗೊತ್ತಾಗುತ್ತದೆ. ಅಷ್ಟರಲ್ಲಿ ಹಣ ಆ ಹೋಟೆಲ್‌ನ ಪೆಟ್ಟಿಗೆ ಸೇರಿರುತ್ತದೆ.

ಹೀಗೆ, ಮೈಸೂರು ಪಾಕ್, ಮೈಸೂರು ಸ್ಯಾಂಡಲ್ ಸೋಪು, ಮೈಸೂರು ರೇಷ್ಮೆ... ಎಲ್ಲದರಲ್ಲೂ ಫೇಕು. ಅದರಲ್ಲೂ ಅರಮನೆ ಹಾಗೂ ಮೃಗಾಲಯ ಸುತ್ತಮುತ್ತ ಇಂಥ ಬ್ರ್ಯಾಂಡ್‌ಗಳ ಹೆಸರಲ್ಲಿ ವಂಚಿಸುವವರು ಹೆಚ್ಚಾಗಿದ್ದಾರೆ.

### ಪ್ರವಾಸೋದ್ಯಮವಾದ ದಸರೆ!

ವಿಜಯನಗರ ಸಾಮ್ರಾಜ್ಯದಲ್ಲಿ ನಡೆಯುತ್ತಿದ್ದ ಮಹಾನವಮಿ ಪರಂಪರೆಯನ್ನು ಕ್ರಿ.ಶ.1610ರಲ್ಲಿ ಯದುವಂಶದ ರಾಜ ಒಡೆಯರ್, ತಮ್ಮ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಪುನರ್ ಸ್ಥಾಪಿಸಿ ಆಚರಿಸಿಕೊಂಡು ಬಂದ ದಸರಾ ಮಹೋತ್ಸವಕ್ಕೆ ಇದೀಗ 411ರ ಸಂಭ್ರಮ. ಈ ಬಾರಿ ಅ.7ರಿಂದ 15ರವರೆಗೆ ನಡೆಯಲಿದ್ದು, ಸಿದ್ಧತೆಗಳು ಆರಂಭವಾಗಿವೆ. ದೀಪಾಲಂಕಾರ ಮಾಡಿದ್ದು,




ಮೈಸೂರಿನ ಕೆ.ಆರ್.ವೃತ್ತದಲ್ಲಿ ಗಜಪಡೆಯ ಸೊಬಗು

**ಮೈಸೂರು ನಗರಿಯನ್ನು ಮಾದರಿ ಪ್ರವಾಸಿ ಕೇಂದ್ರವನ್ನಾಗಿಸುವ, ದಸರಾ ಮಾತ್ರವಲ್ಲದೇ ವರ್ಷವಿಡೀ ಪ್ರವಾಸಿಗರನ್ನು ಆಕರ್ಷಿಸುವ ವಿಚಾರ ಪ್ರಗತಿ ಕಂಡಿಲ್ಲ. ಪಕ್ಕದ ಕೇರಳದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿರುವ, ಅತ್ಯಾಕರ್ಷಕವಾಗುತ್ತಿರುವ ವಿಚಾರದಿಂದಲೂ ಪಾಠ ಕಲಿತಂತಿಲ್ಲ.**

## ದಸರೆಯೇ ವ್ಯಾವಹಾರಿಕವಾಗಿದೆ...

ಹಿಂದೆ ದಸರೆಯು ಸಮಾನತೆ ಉತ್ಸವದಂತಿತ್ತು. ಸಂಸ್ಕೃತಿ ಸಾರುವ ಹಬ್ಬವಾಗಿತ್ತು. ಈಗಿನ ದಸರೆ ನೋಡಿದರೆ ಹಿಂದಿನ ಖುಷಿ ಸಿಗಲ್ಲ. ಆರ್ಥಿಕ ದೃಷ್ಟಿಯಿಂದ, ವ್ಯವಹಾರಿಕವಾಗಿ ಮಾತ್ರ ನೋಡಲಾಗುತ್ತಿದೆ. ಬರೀ ಮನರಂಜನೆಯಾಗಿದ್ದು, ಮೂಲ ತತ್ವಗಳೇ ಮರೆಯಾಗಿ ಹೋಗಿವೆ. ಗ್ರಾಹಕರ ದೃಷ್ಟಿಕೋನದಲ್ಲಿ ನೋಡಲಾಗುತ್ತಿದೆ. ಕಾಲದ ಮಹಿಮೆ ಇರಬಹುದು.

**–ಡಾ. ಆರ್. ಬಾಲಸುಬ್ರಹ್ಮಣ್ಯಂ**
ವಿ–ಲೀಡ್ ಸಂಸ್ಥಾಪಕ,
ಮೈಸೂರು



